OCTOBER 18, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ಆದ್ಯತೆ ಮೇಲೆ, ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರ:** ಕಿತ್ತೂರಿನಲ್ಲಿ ಪ್ರತಿಭಟನಾ ನಿರತ ರೈತರಿಗೆ, ಮುಖ್ಯಮಂತ್ರಿ ಭರವಸೆ.
- **ಮಾದಕ ದ್ರವ್ಯ ವ್ಯಸನ ಮುಕ್ತ ಸಮಾಜ ನಿರ್ಮಾಣ:** ರಾಜ್ಯ ಸಶಸ್ತ್ರ ಮೀಸಲು ಪೊಲೀಸ್ ಪಡೆಯಿಂದ, ಮೋಟಾರ್‌ಸೈಕಲ್ ಜಾಥಾ.
- **ಡಾಕ್ಟರ್ ಬರಗೂರು ರಾಮಚಂದ್ರಪ್ಪ ಅವರಿಗೆ, 'ಪುವೆಂಪು ಪ್ರಶಸ್ತಿ'ಯ ಗೌರವ.**
- **ಇಂದು, ವಿಶ್ವ ಋತುಬಂಧ,** ಜನಜಾಗೃತಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಕಬ್ಬು ಬೆಳೆಗಾರರ ಸಮಸ್ಯೆ, ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ; ಕೇಂದ್ರ ಸರ್ಕಾರ ಕೂಡ, ಸಮಿತಿ ರಚಿಸಿ, ವಿವಿಧ ರಾಜ್ಯಗಳೊಂದಿಗೆ ಚರ್ಚಿಸುತ್ತಿದೆ. ರೈತರು ಕೈಗೊಂಡಿರುವ ಪಾದಯಾತ್ರೆಯನ್ನು ನಿಲ್ಲಿಸುವಂತೆ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಮನವಿ ಮಾಡಿದರು. ಬೆಳಗಾವಿ ಜಿಲ್ಲೆ, ಕಿತ್ತೂರಿನಲ್ಲಿ, ಪ್ರತಿಭಟನಾ ನಿರತ ರೈತರೊಂದಿಗೆ ಸಮಾಲೋಚಿಸಿದ ಅವರು, ಶೀಘ್ರ ರೈತ ನಿಯೋಗದೊಂದಿಗೆ ಸಭೆ ನಡೆಸಿ, ಕೇಂದ್ರದೊಂದಿಗೆ ಚರ್ಚಿಸಲಾಗುವುದು. ರೈತರ ಸಂಕಷ್ಟ, ತಮಗೆ ಅರ್ಥವಾಗುತ್ತದೆ. ಸಮಸ್ಯೆಯ ಪರಿಹಾರಕ್ಕೆ ತಾವು ಆದ್ಯತೆ ನೀಡುವುದಾಗಿ, ಮುಖ್ಯಮಂತ್ರಿ ನುಡಿದರು.

<><><>

ಕಬ್ಬಿಗೆ ಕನಿಷ್ಟ ಬೆಂಬಲ ಬೆಲೆ ಪ್ರಕಟಿಸುವ ವರೆಗೆ, ಬೆಳಗಾವಿಯಿಂದ ಹುಬ್ಬಳ್ಳಿ ಚಲೋ ಪ್ರತಿಭಟನೆಯನ್ನು, ಮುಂದುವರಿಸುವುದಾಗಿ, ಪ್ರತಿಭಟನಾ ನಿರತ ರೈತ ಮುಖಂಡರು, ತಿಳಿಸಿದರು.

<><><>

ಕೇಂದ್ರ ಸರ್ಕಾರ ನೇಮಿಸಿದ, ಪ್ರೊಫೆಸರ್ ರಮೇಶ ಚಂದ್ರ ನೇತೃತ್ವದ ಸಮಿತಿ, ಶೀಘ್ರದಲ್ಲೇ ಕಬ್ಬು ಬೆಳೆಗಾರರ ಸಮಸ್ಯೆ, ಬೇಡಿಕೆಗಳ ಕುರಿತು, ಸಮಗ್ರ ಅಧ್ಯಯನ ನಡೆಸಲಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು, ಕೇಂದ್ರ ಸರ್ಕಾರ ಜಂಟಿ ಸಮಿತಿ ರಚಿಸಿದೆ. ರಾಜ್ಯದಿಂದ 165 ಕೋಟಿ ಲೀಟರ್, ಎಥೆನಾಲ್ ಖರೀದಿಸಲಾಗಿದೆ, ಎಂದರು.

<><><>

ಶಿವಮೊಗ್ಗದ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ವತಿಯಿಂದ ಈ ತಿಂಗಳ 30ನೇ ತಾರೀಖಿನಿಂದ, ನವೆಂಬರ್ 2ರ ವರೆಗೆ, ನಾಲ್ಕು ದಿನಗಳ, ಕೃಷಿ ಮತ್ತು ತೋಟಗಾರಿಕೆ ಮೇಳ ಆಯೋಜಿಸಿದೆ. ನವಿಲೆ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ, 'ಬರ ನಿರ್ವಹಣೆಗಾಗಿ, ನಾವೀನ್ಯತಾ ಕೃಷಿ' ಎಂಬ ಧ್ಯೇಯದೊಂದಿಗೆ, ಬರ ನಿರ್ವಹಣೆ, ನೀರು ಸಂರಕ್ಷಣೆ, ಹವಾಮಾನ ಆಧಾರಿತ ಕೃಷಿ, ಕಡಿಮೆ ನೀರು ಬೇಡುವ ಬೆಳೆಗಳ ತಳಿಗಳು ಹಾಗೂ ತೇವಾಂಶ ಸಂರಕ್ಷಣೆ ಕುರಿತು, ಹೊಸ ದಿಲ್ಲಿಯ, ಭಾರತೀಯ ಕೃಷಿ ಅನುಸಂಧಾನ ಪರಿ 'ತ್ತಿನ, 17ಕ್ಕೂ ಹೆಚ್ಚು ಕೃಷಿ ಸಂಶೋಧನಾ ಸಂಸ್ಥೆಗಳು, ರೈತರಿಗೆ ಮಾರ್ಗದರ್ಶನ ಮಾಡಲಿವೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ, ಮತ್ಸ್ಯ ಕೃಷಿ ಪ್ರಾತ್ಯಕ್ಷಿಕೆ, ಹೈನುಗಾರಿಕೆ ಮತ್ತು ಜಾನುವಾರುಗಳ ಪ್ರದರ್ಶನ, ನಡೆಯಲಿದೆ.

<><><>

ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ, ಮಳೆಯಾಶ್ರಿತ ಕೃಷಿಕರ ಸಹಯೋಗದಲ್ಲಿ, ಮೈಸೂರಿನ ಸಹಜ ಸಮೃದ್ಧ, ಸಿರಿಧಾನ್ಯಗಳ ಕೃಷಿ ಮತ್ತು ಅಕ್ಕಡಿ ಪದ್ಧತಿಯನ್ನು ಜನಪ್ರಿಯಗೊಳಿಸಿ, ಮಹಿಳಾ ಸಂಘಗಳ ಮೂಲಕ ಸಿರಿಧಾನ್ಯಗಳ ಮೌಲ್ಯವರ್ಧನೆ ಮಾಡಿ, ಸಿರಿಧಾನ್ಯ ಮೇಳಗಳನ್ನು ಆಯೋಜಿಸುವ ಮೂಲಕ, ಕಣ್ಮರೆಯಾಗುತ್ತಿದ್ದ ಸಿರಿಧಾನ್ಯ ಕೃಷಿಯನ್ನು ಪುನರುಜ್ಜೀವಿತಗೊಳಿಸಿದೆ. ಹೊಸ ದಿಲ್ಲಿಯಲ್ಲಿ ಆಯೋಜಿತ ಸಮಾರಂಭದಲ್ಲಿ, ಪಂಕಜ ಬನ್ಸಲ್ ಮತ್ತು ಐಶ್ವರ್ಯಾ ಬನ್ಸಲ್, 'ಕಿಸಾನ್ ಸಶಕ್ತೀಕರಣ್ ಸಮ್ಮಾನ್' ಪ್ರಶಸ್ತಿ ಪ್ರದಾನಿಸಿ, ಗೌರವಿಸಿದರು. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಸಹಜ ಸಮೃದ್ಧದ ವಿಶ್ವಸ್ಥ, ಜಿ. ಕೃಷ್ಣಪ್ರಸಾದ.

<><><>

ಜಿ. ಕೃಷ್ಣಪ್ರಸಾದ ಧ್ವನಿ 60 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ನಿರ್ವಹಣೆ ಹಾಗೂ ವಿಶ್ವ ಪಾರಂಪರಿಕ ತಾಣದ ಮಾರ್ಗಸೂಚಿಗಳ ಪಾಲನೆ ಕುರಿತ, ಪರಿಶೀಲನೆಗೆ, ಯೂನೆಸ್ಕೊ ತಜ್ಞರ ತಂಡ, ಈ ತಿಂಗಳ 24ನೇ ತಾರೀಖು, ಹಂಪಿಗೆ

ಭೇಟಿ ನೀಡಲಿದೆ. ಮೂರು ದಿನಗಳ ಕಾಲ ಪರಿವೀಕ್ಷಣೆ ಹಾಗೂ ಸಭೆಗಳನ್ನು ನಡೆಸಲಿದೆ. ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ, ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಕವಿತಾ ಮನ್ನಿಕೇರಿ ಧ್ವನಿ 36 ಸೆಕೆಂದುಗಳು

<><><>

ಮಾದಕ ದ್ರವ್ಯ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ, ಯುವಜನತೆ ದೃಢ ಸಂಕಲ್ಪ ಮಾಡುವಂತೆ, ಶಿವಮೊಗ್ಗ ಜಿಲ್ಲೆ, ಪೊಲೀಸ್ ವರಿ ್ಟಾಧಿಕಾರಿ ಬಿ. ನಿಖಿಲ್ ಕೋರಿದ್ದಾರೆ. ರಾಷ್ಟ್ರೀಯ ಏಕತಾ ದಿನಾಚರಣೆ, ನಶೆ ಮುಕ್ತ ಭಾರತ ಹಾಗೂ ಕರ್ನಾಟಕ, ಜಾಗೃತಿ ಸಂದೇಶದೊಂದಿಗೆ, ಚಿತ್ರದುರ್ಗ ದಿಂದ ಹಂಚಿನ ಸಿದ್ದಾಪುರ ಮಾರ್ಗವಾಗಿ, ಶಿವಮೊಗ್ಗಕ್ಕೆ ಆಗಮಿಸಿದ, ರಾಜ್ಯ ಸಶಸ್ತ್ರ ಮೀಸಲು ಪೊಲೀಸ್ ಪಡೆಯ, ಮೋಟಾರ್ ಸೈಕಲ್ ಜಾಥಾ ತಂಡವನ್ನು ಸ್ವಾಗತಿಸಿ, ಅವರು ಮಾತನಾಡಿದರು. ಶಿವಮೊಗ್ಗದಲ್ಲಿ ಈ ವ ್ಷ, 550 ಪ್ರಕರಣಗಳನ್ನು ದಾಖಲಿಸಿ, 40 ಕಿಲೋ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ. 'ಬೇಡ ಬ್ರೋ' ಮತ್ತು 'ಆಪರೇ ನ್ ರೈಸ್' ಎಂಬ, ಮಾದಕ ವಸ್ತು ವಿರೋಧಿ, ವಿಶೇಷ ಯುವಜನ ಜಾಗೃತಿ ಅಭಿಯಾನ, ಆಯೋಜಿಸಲಾಗಿದೆ, ಎಂದರು. ಉಕ್ಕಿನ ಮನುಷ್ಯ, ಸರ್ದಾರ ಪಟೇಲರ ಏಕತಾ ಪ್ರತಿಮೆ, ಗುಜರಾತದ ನರ್ಮದಾ ಜಿಲ್ಲೆಯ, ಕೇವಡಿಯಾದಲ್ಲಿ, ಈ ಜಾಥಾ ಮುಕ್ತಾಯಗೊಳ್ಳಲಿದೆ.

<><><>

ತುಳುರತ್ನ ಡಾಕ್ಟರ್ ಪುಂಡೂರು ವೆಂಕಟರಾಜ ಪುಣಿಂಚಿತ್ತಾಯ ಅವರ, ಸಂಸ್ಮರಣೆ ಹಿನ್ನೆಲೆ, ಹಿರಿಯ ಸಾಹಿತಿ ಡಾಕ್ಟರ್ ಬರಗೂರು ರಾಮಚಂದ್ರಪ್ಪ ಅವರಿಗೆ, 2026ನೇ ಸಾಲಿನ, 'ಪುವೆಂಪು ಪ್ರಶಸ್ತಿ' ಪ್ರದಾನಿಸಲಾಗುವುದು ಎಂದು, ಕಾಸರಗೋಡಿನ, ಪುವೆಂಪು ಪ್ರತಿಷ್ಠಾನದ ಅಧ್ಯಕ್ಷ, ಕುಂಟಾರು ರವೀಶ ತಂತ್ರಿ, ಮಂಗಳೂರಿನಲ್ಲಿ ತಿಳಿಸಿದ್ದಾರೆ. 24 ನೇ ತಾರೀಖು, ಬೆಳಗ್ಗೆ 10 ಗಂಟೆಗೆ, ಮಂಜೇಶ್ವರದ ಗಿಳಿವಿಂಡು ಪಾರ್ತಿಸುಬ್ಬ ವೇದಿಕೆಯಲ್ಲಿ, ಸಮಾಜ ಕಲ್ಯಾಣ ಖಾತೆ ಸಚಿವ ಕೆ.ಎಚ್.ಮುನಿಯಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ, ಎಂದರು. ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಟ್ರಸ್ಟ್ ಅಧ್ಯಕ್ಷ, ಡಾಕ್ಟರ್ ಎಂ.ವೀರಪ್ಪ ಮೊಯ್ಲಿ, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಸೋಮಣ್ಣ ಬೇವಿನಮರದ, ಪಾಲ್ಗೊಳ್ಳಲಿದ್ದಾರೆ.

<><><>

"ಮಧ್ಯ ವಯಸ್ಸಿನಲ್ಲಿ, ದೀರ್ಘಕಾಲದ ನೋವು", ಎಂಬ ಘೋಷ ವಾಕ್ಯದೊಂದಿಗೆ, ವಿಶ್ವ ಋತುಬಂಧ ದಿನಾಚರಣೆ, ಇಂದು. ಅಂತಾರಾಷ್ಟ್ರೀಯ ಋತುಬಂಧ ಸೊಸೈಟಿ, 1978 ರಿಂದ, ಋತುಬಂಧದ ಬಗ್ಗೆ ಜಾಗೃತಿ, ಮಹಿಳೆಯರ ಆರೋಗ್ಯ ಮತ್ತು ಯೋಗಕ್ಷೇಮವನ್ನು ಬೆಂಬಲಿಸಲು, ಕೆಲಸ ಮಾಡುತ್ತಿದೆ. 2009 ರಿಂದ, ಅಕ್ಟೋಬರ್ 18 ರಂದು, ವಿಶ್ವ ಋತುಬಂಧ ದಿನವನ್ನು ಆಚರಿಸುತ್ತದೆ.

<><><>

ಕೇಂದ್ರ ಲೋಕಸೇವಾ ಆಯೋಗ ನಡೆಸುವ, ರಾಷ್ಟ್ರೀಯ ರಕ್ಷಣಾ ಅಕಾಡೆಮಿ – ಎನ್.ಡಿ.ಎ. ಲಿಖಿತ ಪರೀಕ್ಷೆಯಲ್ಲಿ, ಬೀದರಿನ ಚನ್ನಬಸವೇಶ್ವರ ಗುರುಕುಲದ, ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ, ಅಭಿ ೇಕ ಚಂದ್ರಕಾಂತ ಹಾಗೂ ಸುದರ್ಶನ ಬಿರಾದಾರ ಸೇರಿದಂತೆ, ಐವರು ಉತ್ತೀರ್ಣರಾಗಿದ್ದಾರೆ. ಐವರು ವಿದ್ಯಾರ್ಥಿಗಳನ್ನು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸನ್ಮಾನಿಸಿದರು. ಡಾಕ್ಟರ್ ಬಸವಲಿಂಗ ಪಟ್ಟದ್ದೇವರು ಹಾಗೂ ಶ್ರೀ ಗುರುಬಸವ ಪಟ್ಟದ್ದೇವರು, ಅಭಿನಂದಿಸಿದರು.

<><><>

ಕೊಡಗು ಜಿಲ್ಲೆ, ಬ್ರಹ್ಮಗಿರಿ ತಪ್ಪಲಿನ, ತಲಕಾವೇರಿ ದೇವಾಲಯದಲ್ಲಿ, ಮೇ ' ಲಗ್ನದಲ್ಲಿ ಶ್ರೀ ಕಾವೇರಿ ತುಲಾ ಸಂಕ್ರಮಣ, ಪವಿತ್ರ ತೀರ್ಥೋದ್ಭವ ಜರುಗಿತು. ಸಹಸ್ರಾರು ಭಕ್ತರು, ಕಣ್ತುಂಬಿಕೊಂಡರು.

<><><>

ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ, ಚಿತ್ರದುರ್ಗ ಜಿಲ್ಲೆಯ, **'ಖಾಸ ಬೇಡರ ಪಡೆ',** ತಿಪ್ಪೇಸ್ವಾಮಿ ಚಲ್ಲೂರು ನೇತೃತ್ವದ ಜಾನಪದ ಕಲಾತಂಡ, ಭಾಗವಹಿಸಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಆದ್ಯತೆ ಮೇಲೆ, ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರ:** ಕಿತ್ತೂರಿನಲ್ಲಿ ಪ್ರತಿಭಟನಾ ನಿರತ ರೈತರಿಗೆ, ಮುಖ್ಯಮಂತ್ರಿ ಭರವಸೆ.
- **ಮಾದಕ ದ್ರವ್ಯ ವ್ಯಸನ ಮುಕ್ತ ಸಮಾಜ ನಿರ್ಮಾಣ:** ರಾಜ್ಯ ಸಶಸ್ತ್ರ ಮೀಸಲು ಪೊಲೀಸ್ ಪಡೆಯಿಂದ, ಮೋಟಾರ್‌ಸೈಕಲ್ ಜಾಥಾ.
- **ಡಾಕ್ಟರ್ ಬರಗೂರು ರಾಮಚಂದ್ರಪ್ಪ ಅವರಿಗೆ, 'ಪುವೆಂಪು ಪ್ರಶಸ್ತಿ'**ಯ ಗೌರವ.
- **ಇಂದು, ವಿಶ್ವ ಋತುಬಂಧ,** ಜನಜಾಗೃತಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>